ಬೆಳ್ತಂಗಡಿಗೆ ವಿದ್ಯುತ್ ಪೂರೈಕೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ರೀತಿಯ ಪೂರೈಕೆಯಿಂದ ಬೆಳ್ತಂಗಡಿ ತಾಲ್ಲೂಕಿನಲ್ಲಿ ದಿನ ಒಂದಕ್ಕೆ ೫೦ ಬಾರಿಗೂ ಮಿಕ್ಕಿ ನಿಲುಗಡೆಯಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮಂಗಳೂರಿನಿಂದ ನೇರವಾಗಿ ಬೆಳ್ತಂಗಡಿಗೆ ವಿದ್ಯುತ್ ಪೂರೈಕೆ ಮಾಡುವ ಲೈನಿನ ಕೆಲಸ ಪೂರ್ತಿಯಾಗಿ ಸುಮಾರು ೬ ತಿಂಗಳು ಕಳೆದರೂ ಕೂಡ ನೇರವಾಗಿ ವಿದ್ಯುತ್ ಪೂರೈಕೆ ಮಾಡದಿರಲು ಕಾರಣವೇನು; ಎಷ್ಟು ಸಮಯದೊಳಗೆ ನೇರವಾಗಿ ವಿದ್ಯುತ್ ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಬೆಳ್ತಂಗಡಿಗೆ ಒಂದೆ ಮಂಗಳೂರಿನಿಂದ ವಿದ್ಯುತ್ ಸರಬರಾಜಾಗುತ್ತಿದ್ದುದ್ದನ್ನು ಬದಲಿಸಿ ಪುತ್ತೂರಿನಿಂದ ಸರಬರಾಜು ಮಾಡಲಾಗುತ್ತಿದೆ. ಪುತ್ತೂರು ಸ್ಟೇಷನ್ ಓವರ್ ಲೋಡ್ ಆದಾಗ ಅನಿವಾರ್ಯವಾಗಿ ವಿದ್ಯುತ್ ನಿಲುಗಡೆ ಕನಿಷ್ಟ ಅವಧಿಗೆ ಆಗುತ್ತದೆ.

ಆ) ಮಂಗಳೂರಿನಿಂದ ಬೆಳ್ತಂಗಡಿಗೆ ನೇರ ೩೩ ಕೆ ವಿ ಲೈನ್ ನಿರ್ಮಾಣಗೊಂಡಿದೆ. ಇದನ್ನು ಪರೀಕ್ಷಿಸಿದ ಮುಖ್ಯ ಪರೀಕ್ಷಕರು ಕೆಲವು ನ್ಯೂನತೆ ಗುರುತಿಸಿದ್ದರು. ಇವುಗಳನ್ನೆಲ್ಲಾ ಸರಿಪಡಿಸಲಾಗಿ ಸರ್ಕಾರದ ಮುಖ್ಯ ವಿದ್ಯುತ್ ಪರೀಕ್ಷಕರಿಂದ ಲೈನು ಚಾರ್ಜ್ ಮಾಡಲು ಈಗ ಅನುಮತಿ ದೊರಕಿದ್ದು ೨೧. ೩. ೮೯ರಂದು ಪರೀಕ್ಷಣಾ ಛಾರ್ಜ್ ಮಾಡುವ ಕಾರ್ಯಕ್ರಮವಿದೆ. ಈ ಲೈನನ್ನು ಒಂದು ವಾರದೊಳಗೆ ಕಾರ್ಯ ನಿರತ ಮಾಡಿ ಬೆಳ್ತಂಗಡಿಗೆ ಮಂಗಳೂರಿನಿಂದ ವಿದ್ಯುತ್ತನ್ನು ನೇರವಾಗಿ ಸರಬರಾಜು ಮಾಡಲಾಗುತ್ತದೆ.

ವಿದ್ಯುತ್ ವೋಲ್ಟೇಜ್ ಡ್ರಾಪಿನಿಂದಾದ ತೊಂದರೆ

೩೧೮ (೬೪೮) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ರಾಜ್ಯದಲ್ಲಿರುವ ಜನತೆ ವಿದ್ಯುತ್ ವೋಲ್ಟೇಜ್ ಡ್ರಾಪಿನಿಂದಾಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ತೊಂದರೆಗಳಿಗೆ ಕಾರಣಗಳೇನು ? (ವಿವರವನ್ನೊದಗಿಸುವುದು)

ಇ) ಕರ್ನಾಟಕ ರಾಜ್ಯದಲ್ಲಿರುವ ವಿದ್ಯುತ್ತಿನ (ವೋಲ್ಟೇಜ್ ಡ್ರಾಪ್) ತೊಂದರೆಯಿಂದಾಗಿ ಸಾವಿರಾರು ರೈತರ ಪಂಪು ಸೆಟ್ಟುಗಳು ಸುಟ್ಟು ಹೋಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ರಾಜ್ಯದ ರೈತರಿಗಾದ ನಷ್ಟಕ್ಕೆ ಪರಿಹಾರ ಕೊಡಲಾಗುವುದೇ ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಬೆಳಿಗ್ಗೆ ಮತ್ತು ಸಾಯಂಕಾಲ ಪೀಕಲೋಡ್ ವೇಳೆಯಲ್ಲಿ ವೋಲ್ಟೇಜ್‌ನಲ್ಲಿ ಇಳಿತಾಯ ಉಂಟಾಗುತ್ತಿದೆ.

ಆ) ೧೦೦೦ ಕೆ. ವಿ. ಎ. ವರೆಗಿನ ಡಿಮಾಂಡ್ ಬೇಡಿಕೆ ಇರುವ ಹೆಚ್. ಟಿ. ಬಳಕೆದಾರರು ಮತ್ತು ಎಲ್ಲಾ ಎಲ್, ಟಿ. ಬಳಕೆದಾರರ ವಿದ್ಯುತ್ ಬಳಕೆ ಮೇಲಿನ ಕಡಿತ ಪೂರ್ಣವಾಗಿ ತೆಗೆಯಲಾಯಿತು. ಹಾಗೆಯೇ ೧೦೦೦ ಕೆ. ವಿ. ಎ. ಮೇಲಿನ ಡಿಮಾಂಡ್ ಇರುವ ಹೆಚ್. ಟಿ. ಬಳಕೆದಾರರ ಬಳಕೆ ಮೇಲಿನ ಕಡಿತ ಇಳಿಸಲಾಯಿತು, ಇದು ೧೫. ೯. ೧೯೮೮ ಮತ್ತು ನಂತರ ಬೀಳುವ ಮೀಟರ್ ಓದುವ ದಿನಾಂಕದಿಂದ ಜಾರಿಗೆ ಬಂತು. ಮಳೆಗಾಲ ಮುಗಿದ ಮೇಲೆ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಬೇಡಿಕೆ ಏರಿತು. ಹೀಗಾಗಿ ಪೀಕ್‌ಲೋಡ್ ವೇಳೆ ವಿದ್ಯುತ್ ಬೇಡಿಕೆ ಲಭ್ಯವಿರುವ ಪ್ರಮಾಣ ಮೀರಿ ವೋಲ್ಟೇಜ್‌ನಲ್ಲಿ ಕುಸಿತ ಉಂಟಾಯಿತು ಬಹಳಷ್ಟು ಸ್ಟೇಷನ್‌ಗಳು ಓವರ್‌ಲೋಡ್ ಆದವು. ಇದರಿಂದ ಕೂಡಲೇ ಅನಿಯಮಿತ ಲೋಡ್ ಷೆಡ್ಡಿಂಗ್ ಜಾರಿಗೆ ತರಲಾಯಿತು. ಪರಿಸ್ಥಿತಿ ಸಾಧ್ಯವಾದ ಮಟ್ಟಿಗೆ ಸುಧಾರಿಸಲು ನಿಯಮಿತ ಲೋಡ್ ಷೆಡ್ಡಿಂಗ್ ಜಾರಿಗೆ ತರುವುದು ಅನಿವಾರ್ಯವಾಯಿತು.

ಇ) ೩೧. ೩. ೧೯೮೮ರವರೆಗೆ ಕಳೆದ ಮೂರು ವರ್ಷಗಳ ಸವಿಸ್ತೆಯಿಂದ ಕಡಿಮೆ ವೋಲ್ಟೇಜಿನಿಂದ ಪಂಪುಸೆಟ್ಟುಗಳು ಸುಟ್ಟು ಹೋದ ಪ್ರಸಂಗಗಳು ಮಂಡಳಿಯ ಗಮನಕ್ಕೆ ಬಂದಿಲ್ಲ, ವೋಲ್ಟಾರುಗಳು ವಿವಿಧ ಕಾರಣಗಳಿಗಾಗಿ ಸುಡುತ್ತವೆ. ಮಂಡಲಿ ಪರಿಹಾರ ಕೊಡುವ ಪ್ರಶ್ನೆ ಇಲ್ಲ.

ಜಲವಿದ್ಯುತ್ ಯೋಜನೆಗೆ ಹೈಡ್ರಾಲಿಕ್ ಎಲಿವೇಟರ್ ಖರೀದಿಸಿದ ಬಗ್ಗೆ

೩೧೯ (೩೨೩) ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ವಿದ್ಯುತ್ ನಿಗಮವು ತನ್ನ ಯಾವ ಜಲವಿದ್ಯುತ್ ಯೋಜನೆಗಾಗಿ ಪೋಕ್‌ಲೇನ್ ಹೈಡ್ರಾಲಿಕ್ ಎಲವೇಟರನ್ನು ಫ್ರಾನ್ಸ್ ದೇಶದಿಂದ ಖರೀದಿಸಿದೆ ?

ಆ) ಇದಕ್ಕಾಗಿ ನಿಗಮದವರು ವೆಚ್ಚ ಮಾಡಿದ ಹಣವೆಷ್ಟು ?

ಇ) ಪ್ರಸ್ತುತ ಈ ಪೋಕ್ಲೈನ್ ಯಂತ್ರ ನಿಗಮದ ಮಾಲಿಕತ್ವದಲ್ಲಿದೆಯೇ ? ಅಥವಾ ಗುತ್ತಿಗೆದಾರರಿಗೆ ಮಾರಾಟ ಮಾಡಲಾಗಿದೆಯೇ ?

ಈ) ಈ ಯಂತ್ರದ ಖರೀದಿ ವಿಚಾರದಲ್ಲಿ ನಡೆದಿರುವ ಆವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಪೋಕ್ಲೈನ್ ಹೈಡ್ರಾಲಿಕ್ ಎಕ್ಸ್‌ಕವೇಟರ್‌ಗಳನ್ನು ಚಕ್ರಾ ಯೋಜನೆಯ ಕೆಲಸಗಳಿಗಾಗಿ ಖರೀದಿಸಲಾಗಿತ್ತು.

ಆ) ೭ ಎಲ್ ಸಿ-೮೦ ಪೋಕ್ಲೈನ್‌ಗಳನ್ನು ಪ್ರತಿಯಂತ್ರಕ್ಕೆ ರೂ. ೧೨.೫ ಲಕ್ಷ ರೂ. ಗಳ ದರದಲ್ಲಿ ಮತ್ತು ೩ ಸಿಕೆ-೩೦೦ ಪೋಕ್ಲೈನ್‌ಗಳನ್ನು ಪ್ರತಿ ಒಂದಕ್ಕೆ ೩೫ ಲಕ್ಷ ರೂ. ಗಳ ದರದಲ್ಲಿ ಕೊಳ್ಳಲು ಒಟ್ಟು ೧.೯೨ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

ಇ) ಎಲ್ಲ ಯಂತ್ರಗಳೂ ಕರ್ನಾಟಕ ವಿದ್ಯುತ್ ನಿಗಮದ ಅಧೀನದಲ್ಲಿದೆ. ಚಕ್ರಾ ಹಾಗೂ ವರಾಹಿ ಯೋಜನೆಯ ಕೆಲಸದ ಸಂಯೋದಲ್ಲಿ ದೀರ್ಘಾವಧಿ ಕಾಲದ ಬಾಡಿಗೆಯ ಮೇಲೆ ಗುತ್ತಿಗೆದಾರರಿಗೆ ನಿಗಮದ ನಿಯಮಾವಳಿಗಳ ಪ್ರಕಾರ ಕೊಡಲಾಗಿತ್ತು. ಚಕ್ರಾ ಯೋಜನೆಯ ಕೆಲಸವು ಮುಗಿದ ನಂತರ ಎರಡು ಯಂತ್ರಗಳನ್ನು ಕಲ್ಲಿದ್ದಲು ಕೆಲಸಕ್ಕೋಸ್ಕರ ರಾಯಚೂರು ಶಾಖೋತ್ಪನ್ನ ಕೇಂದ್ರಕ್ಕೆ ಹಾಗೂ ೨ ಯಂತ್ರಗಳನ್ನು ಕಾಳಿ ಜಲವಿದ್ಯುತ್ ಯೋಜನೆಯ ಕೆಲಸಗಳಿಗೂ ವರ್ಗಾಯಿಸಲಾಯಿತು. ಎಲ್ಲ ಯಂತ್ರಗಳು ಸಮರ್ಪಕ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುವ ಸ್ಥಿತಿಯಲ್ಲಿವೆ.

ಈ) ಇಲ್ಲ.

ದೊಡ್ಡ ಕಲ್ಲು ಗಣಿಗಳಿಂದ ಬರುವ ವಾರ್ಷಿಕ ಆದಾಯ

೩೨೦ (೩೫೮) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ದೊಡ್ಡ ಕಲ್ಲು ಗಣಿ ಗುತ್ತಿಗೆಯನ್ನು ಹಿಡಿದ ಗುತ್ತಿಗೆ ಕಂಪನಿಗಳು ಎಷ್ಟು ? ಅವುಗಳ ಹೆಸರುಗಳೇನು ? (ವಿವರ ಒದಗಿಸುವುದು)

ಆ) ವಿವಿಧ ಕಂಪನಿಗಳಿಂದ ಬಂದ ರಾಜಧನದ ಮೊತ್ತ ಎಷ್ಟು ? (೧೯೮೫-೮೬, ೮೬-೮೭, ೧೯೮೭-೮೮ರ ವರೆಗೆ) ವಿವರಿಸುವುದು,

ಇ) ಗುಡ್ಡಗಳ ವಿಪರೀತ ಕಲ್ಲು ಸಾಗಾಣಿಕೆಯಿಂದ ಪರಿಸರ ಅಸಮತೋಲನೆಯು ಕಾಣಿಸಿಕೊಂಡು ನಿಸರ್ಗ ನಾಶವಾಗುವುದಿಲ್ಲವೆ ?